ಆರೋಗ್ಯಕರವಾಗಿತ್ತು.

ಉದರದಿಂದ ನೀರು ಹೊರ ಹಾಕಿಸಲು ಯುದ್ಧ ಪಾತಳಿಯಲ್ಲಿ ಪ್ರಯತ್ನ ನಡೆದಿತ್ತು. ನಡು ನಡುವೆ ಎಷ್ಟು ಪ್ರಮಾಣದ ನೀರು ಬತ್ತಿದೆ. ಏನು ಎತ್ತ ತಿಳಿಯಲು ಸ್ಕ್ಯಾನ್ ಮಾಡಿಸಲಾಗುತ್ತಿತ್ತು. ನೀರು ಕರಗಲು ವಾರಕ್ಕಿಂತ ಅಧಿಕ ಕಾಲ ಹಿಡಿಯಿತು. ಆರಂಭದಿಂದನೆ ಅವಳ ಮೈ ತುರಿಕೆ ಇತ್ತು. ಕೆರೆದು ಕೆರೆದು ಮೈಮೇಲೆ ತುರಿಕೆಯ ಗಾಯಗಳಾಗಿದ್ದವು. ಬಿಲ್‌ರುಬಿನ್ ಸಾಮಾನ್ಯ ಆಗುವ ತನಕ ತುರಿಕೆ ಬಿಟ್ಟದ್ದಲ್ಲ. ಅದರ ಲಕ್ಷಣದಿಂದ ಕೈಕಾಲುಗಳು ಹರಿಯುತ್ತಿದ್ದವು. ರಾಮಗೊಂಡ ನಿತ್ಯ ಎರಡು ಬಾರಿ ಕಾಲು, ಪಾದಗಳನ್ನು ಒತ್ತುತ್ತಿದ್ದ. ಅವಳು ನಿದ್ದೆಗೆ ಜಾರುತ್ತಿದ್ದಳು.

ಅಂದು ಡಾ. ಸಂಕೇಶ್ವರ ರೌಂಡ್ಸ್‌ಗೆ ಬಂದಿದ್ದರು. ಅದೇ ನಗುಮುಖ. ಸಂಗಡ ಡಾ. ಸಜ್ಜನ ಇದ್ದರು.

ರಾಮಗೊಂಡ, 'ಸರ, ದಿನಾ ತತ್ತಿ ಮತ್ತ ಚಿಕನ್ ಕೊಡಾಕತ್ತೀನಿ... ಹಸವು ಛಲೋನ ಐತಿ...' ಅಂದ.

ಡಾಕ್ಟರ್, 'ಗುಡ್...ಹಂಗ ಮುಂದವರೆಸರಿ' ಅಂದರು. ಸವಿತಾಳಿಗೆ 'ಎರಡ ತಿಂಗಳ ರೆಸ್ಟ್ ಮಾಡಬೇಕು ನೋಡ... ನಿಮ್ಮ ಆಫೀಸಗೆ ಹೇಳಿ ರಜಾ ಹಾಕು... ಆರಾಮ ತಿಂದುಂಡ ರೆಸ್ಟ್ ಮಾಡೋದು ಅಷ್ಟಾ ನಿಂದ ಕೆಲಸ...'

'ಹೂನ್ರಿ... ಮೈ ಕಿಚ್ಚ ಬಿಡೋದು ಜರಾ ಕಮ್ಮಿ ಆಗೇತಿ, ಆದರ ಹೋಗವಾಲ್ತು ರೀ... ಮತ್ತ ಇನ್ನೂ ಕಣ್ಣ ಹಳದೀನ ಅದಾವು...' ಸವಿತಾ ಕೇಳಿದಳು.

'ಬಿಲರುಬಿನ್‌ದು ಸ್ವಲ್ಪ ಫ್ಲಕ್ಚುವೆಷನ್ ಐತಿ... ನಿಧಾನಕ್ಕ ಅದ ಕಡಿಮೆ ಆಗತೈತಿ... ಕೆಲವರಿಗಿ ಸ್ವಲ್ಪ ಟೈಮ್ ತಗೋಳತೇತಿ... ನೀ ಅದೆಲ್ಲ ಭಾಳ ತಲಿ ಕೆಡಿಸಿಕೊಬೇಡ...ಅದನ್ನ ನಮಗ ಬಿಡು...' ಅಂದರು. ಆ ನಗುಮೊಗದಲ್ಲಿ ಆತ್ಮವಿಶ್ವಾಸ ಮತ್ತು ಒಂದು ನಿಸ್ಪೃಹ ಸೇವೆಯಿತ್ತು. ಹೊಟ್ಟೆ ತಪಾಸಿಸಿದರು.



ಕೈಯಿಟ್ಟು ಬೆರಳಿಂದ ಬಡೆದು ನೋಡಿದರು.

'ಒಂದಕ್ಕ ಛಲೋ ಆಕ್ಕೇತಲ್ಲ?'

'ಹೂನ್ರಿ...'

'ನಾಳೆ ಒಮ್ಮೆ ಸ್ಕ್ಯಾನ್ ಮಾಡಿ ನೋಡೋಣ... ಲಕ್ಕಿಲಿ, ಬಹುತೇಕ ನೀರು ಕಮ್ಮಿ ಆಗಿರಬೋದು... ಇನ್ನೆರಡು ದಿನದಾಗ ಡಿಸ್ಚಾರ್ಜ ಮಾಡತೀನಿ... ಹತ್ತ ದಿನಾ ಆದವು...' ಹೇಳಿ ಹೊರಟರು. ಅವರ ಹಿಂದಿಂದೆ ರಾಮಗೊಂಡ ಹೋದ.

'ಸರ, ಡಿಸ್ಚಾರ್ಜ ಮಾಡತೀನಿ ಅಂದ್ರಿ, ಕೇಳಿ ಛಲೋ ಅನಿಸಿತು.. ಈಗ ಹೆಂಗದಾಳು ಅಂತೀರಿ? 'ಶೀ ಮೇ...' ಅಂದಿದ್ರಿ...'

'ನಾನ ಹೇಳತೀನಿ... ಕಾಲ ಕೂಡಿ ಬಂದಿಲ್ಲ.' ಅಂತಂದು ಹೊರಟರು.

* * *

ಡಿಸ್ಚಾರ್ಜ ಪೇಪರ್ ಸಿದ್ಧಗೊಂಡವು. ಆತ ಬಿಲ್ಲು ಮತ್ತು ಹಣ ಸಂದಾಯ ಮಾಡಿದ. ವಾರಕ್ಕೊಮ್ಮೆ ಫಾಲೋಅಪ್‌ಗೆ ಬರುವುದು. ಉಂಡು ತಿಂದು ವಿಶ್ರಾಂತಿ ಪಡೆಯುವುದು.- ಡಾಕ್ಟರ್‌ರ ಸಲಹೆ. ಸಂಕೇಶ್ವರರು ಬರೆದುಕೊಟ್ಟ ಔಷಧ ಚೀಟಿ ಎತ್ತಿಕೊಂಡು ಸುನೀತಾ ಮತ್ತು ಅಮೃತಾ ಮೆಡಿಕಲ್ ಶಾಪ್‌ನತ್ತ ನಡೆದರು.

'ಸರ್, ಒಂದ ಮಾತು...'

'ಹೇಳಿರಿ...'

'ಸರ್ ನೀವ ಪೆನ್ ಇಟ್ಟು ತೋರಿಸಿದ್ರಿ ಅಲ್ಲ! ಅದೀಗ ಯಾವ ಕಡೆಗೆ ಹೊರಳೇದ? ಬಲಗಡೆಗೆನೋ? ಇಲ್ಲ ಎಡಗಡೆಗೆ?'

ಡಾ.ಸಂಕೇಶ್ವರ ಮುಗುಳ್ನಕ್ಕರು. ಬುದ್ಧನ ಬೆಳಕಿನ ನಗು.

'ಇನ್ನೂ ಹಂಗ ಹೇಳೋದಕ್ಕ ಬರೋದಿಲ್ಲ... ಆದರ!'

'ಆದರ ಸರ್!'

'ಬಲಗಡೆಗೆ ಹೊಂಟಾಳು... ಟೇಕ್ ಕೇರ್!' ಎಂದು ನಸುನಕ್ಕರು.

ರಾಮಗೊಂಡ ಧನ್ಯತೆಯಿಂದ ಕೈಮುಗಿದ. ಮತ್ತು ಅಲ್ಲಿಂದ ಹೊರಟ. ಅವನ ಹೆಜ್ಜೆಗಳಲ್ಲಿ ನವ ಚೈತನ್ಯ ತುಂಬಿತ್ತು. ●